# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ - 583105

# VIJAYANAGARA SRI KRISHNADEVARAYA UNIVERSITY

"Jnana Sagara" Campus, Vinayaka Nagara, Contonment, Ballari - 583105

ಪ್ರೊ. ಶಶಿಕಾಂತ ಎಸ್. ಉಡಿಕೇರಿ
ಕುಲಸಚಿವರು (ಮೌಲ್ಯಮಾಪನ)

ದೂರವಾಣಿ : 08392-241011


ಸಂಖ್ಯೆ.ವಿಶ್ರೀಕೃವಿಬ/ಪರೀಕ್ಷಾ/ಘಟಿಕೋತ್ಸವ/ಸು/2020-21/130 ದಿನಾಂಕ.16.12.2020

## ಸುತ್ತೋಲೆ

ಈ ಸುತ್ತೋಲೆ ಮೂಲಕ ವಿಶ್ವವಿದ್ಯಾಲಯದ ಅಧೀನಕ್ಕೊಳಪಟ್ಟ ಸ್ನಾತಕ/ಸ್ನಾತಕೋತ್ತರ ವಿಭಾಗದಲ್ಲಿ ರ್‍ಯಾಂಕ್ ವಿಜೇತ, ಚಿನ್ನದ ಪದಕ ಹಾಗೂ ಪಿಹೆಚ್.ಡಿ. ಪದವಿ ವಿಜೇತರಾದ ವಿದ್ಯಾರ್ಥಿಗಳ ಗಮನಕ್ಕೆ ತರುವುದೇನೆಂದರೆ ದಿನಾಂಕ 29.12.2020 ರಂದು ಜರುಗಲಿರುವ 8ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪದವಿ, ರ್‍ಯಾಂಕ್, ಚಿನ್ನದ ಪದಕಗಳನ್ನು ಪ್ರದಾನ ಮಾಡಲಿದ್ದು, ಸದರಿ ಸಮಾರಂಭಕ್ಕೆ ಕಡ್ಡಾಯವಾಗಿ, ಗೌನುಗಳನ್ನು ಧರಿಸಿಕೊಂಡು ಬರತಕ್ಕದ್ದು, ಆದ್ದರಿಂದ, ಗೌನುಗಳನ್ನು ಬಾಡಿಗೆಗೆ ಪೂರೈಸುವ ವ್ಯವಸ್ಥೆಯನ್ನು ವಿಶ್ವವಿದ್ಯಾಲಯವು ಮಾಡಿರುತ್ತದೆ.

ಘಟಿಕೋತ್ಸವದ ದಿನ ಸಮಾರಂಭಕ್ಕಿಂತ ಮುಂಚಿತವಾಗಿ ವಿಶ್ವವಿದ್ಯಾಲಯದ ಆವರಣಕ್ಕೆ ಆಗಮಿಸಿ 500/-ಮುಂಗಡ ಹಣ ನೀಡಿ ಗೌನುಗಳನ್ನು ಪಡೆದು ಸಮಾರಂಭ ಮುಗಿದ ನಂತರ ಗೌನುಗಳನ್ನು ಮರಳಿಸಿ, ತಾವು ನೀಡಿದ ಮುಂಗಡ ಹಣದಲ್ಲಿ ಬಾಡಿಗೆ ಹಣ ರೂ.300/-ಪಾವತಿಸಿ, ಉಳಿದ ಹಣ ರೂ.200/- ಗಳನ್ನು ಮರಳಿ ಪಡೆಯತಕ್ಕದ್ದು.

ಘಟಿಕೋತ್ಸವದಲ್ಲಿ ಪಿಹೆಚ್.ಡಿ. ರ್‍ಯಾಂಕ್ ಹಾಗೂ ಸ್ವರ್ಣ ಪದಕ ಪಡೆಯುವವರು ಕಡ್ಡಾಯವಾಗಿ ಕೋವಿಡ್-19 ಪರೀಕ್ಷೆಯನ್ನು ಘಟಿಕೋತ್ಸವ ದಿನಾಂಕದ 15 ದಿನದ ಒಳಗಿನ ಅವಧಿಯಲ್ಲಿ ಮಾಡಿಸಿಕೊಂಡು ವರದಿಯನ್ನು ತರಬೇಕೆಂದು ತಿಳಿಸಲಾಗಿದೆ. ಕೋವಿಡ್-19 ಸಂಬಂಧಿ ನಿಯಮಗಳ ಅನುಸಾರ ಮಾಸ್ಕ್ ಧರಿಸುವುದು, ಅಂತರ ಕಾಪಾಡುವುದು, ಸ್ಯಾನಿಟೈಜರ್ ಬಳಸುವುದು ಕಡ್ಡಾಯವಾಗಿರುತ್ತದೆ.

ಕುಲಸಚಿವರು(ಮೌಲ್ಯಮಾಪನ)
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಪ್ರತಿಗಳು:

1. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಎಲ್ಲಾ ಸ್ನಾತಕ/ಸ್ನಾತಕೋತ್ತರ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು ಬಳ್ಳಾರಿ ಮತ್ತು ಕೊಪ್ಪಳಜಿಲ್ಲೆಗಳನ್ನೊಳಗೊಂಡಂತೆ.
2. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕೋತ್ತರ ವಿಭಾಗಗಳು ಮುಖ್ಯಸ್ಥರು ಹಾಗೂ ಸಂಯೋಜಕರುಗಳು.
3. ಸಂಯೋಜಕರು ಪಿ.ಜಿ.ಸೆಂಟರ್, ನಂದಿಹಳ್ಳಿ
4. ನಿರ್ದೇಶಕರು ಪಿ.ಜಿ.ಸೆಂಟರ್, ಕೊಪ್ಪಳ
5. ನಿರ್ದೇಶಕರು ಪಿ.ಜಿ.ಸೆಂಟರ್, ಯಲಬುರ್ಗಾ.
6. ಮಾನ್ಯ ಕುಲಪತಿಗಳ ಆಪ್ತಕಾರ್ಯದರ್ಶಿ ವಿಶ್ರೀಕೃ ವಿಶ್ವವಿದ್ಯಾಯ ಬಳ್ಳಾರಿ.
7. ಕಛೇರಿ ಪ್ರತಿ.

Scanned with CamScanner